ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್. ಎಫ್. ಸಿ ನ್ಯಾಯಾಲಯ ಯಾದಗಿರಿ.

ಸಿಸಿ ನಂ. **296/2020**

| | | |
|---|---|---|
| ಸಾಕ್ಷಿಯ ಹೆಸರುಃ | ಪ್ರಭುಗೌಡ | ಪ್ರಾಸಾಃ 1 |
| ತಂದೆ/ಗಂಡನ ಹೆಸರುಃ | ಬಸರಾಜಪ್ಪ ಗೌಡ | ಚಾಸಾಃ 4 |
| ವಯಸ್ಸು ಃ | 35 ವರ್ಷ | ದಿಃ 06-12- 2024 |
| ಉದ್ಯೋಗಃ | ಪೊಲಿಸ ಪೇದೆ | ಸಾಕ್ಷಿದಾರರಿಗೆ ಪ್ರಮಾಣ ವಚನ ಭೋದಿಸಲಾಯಿತು. |
| ವಾಸ ಸ್ಥಳಃ | ಯಾದಗಿರಿ. | |

ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಬಿಯೋಜಕರವರಿಂದಃ

ನಾನು 2016 ರಿಂದ 2020 ರವರೆಗೆ ಯಾದಗಿರಿ (ಗ್ರಾ) ಪೋಲಿಸ ಠಾಣೆಯಲ್ಲಿ ನಾನು ಪೊಲಿಸ ಪೇದೆ ಎಂದು ಕರ್ತವ್ಯವನ್ನು ನಿರ್ವಹಿಸಿರುತ್ತೇನೆ. ನಾನು ಆರೋಪಿತನನ್ನು ನೋಡಿದರೆ ಗುರುತಿಸುತ್ತೇನೆ.

ದಿನಾಂಕ 08-02-2020 ರಂದು ಸಂಜೆಃ 5.00 ರಿಂದ 6.00 ಗಂಟೆಯವರೆಗೆ ಯಡ್ಡಳ್ಳಿ ಗ್ರಾಮದಲ್ಲಿ ಮಾಹಿತಿ ಬಂದ ಮೇರೆಗೆ ಹೋಗಿ ದಾಳಿ ಮಡಿದಾಗ ಚಾಸಾಃ 1 ರವರು ನಮಗೆ ಆರೋಪಿತನು ಮದ್ಯ ಮಾರಾಟ ಮಾಡುತ್ತಿದ್ದಾನೆ ಎಂದು ಮಾಹಿತಿ ನೀಡಿರುತ್ತಾರೆ, ಆಗ ನಾನು ಚಾಸಾಃ 5 ರಿಂದ 7 ರವರು ಹಾಜರಿದ್ದೇವು. ಸಂಜೆಃ 6.15 ಕ್ಕೆ ಹೋಗಿ ಯಕೋಬಾ ದಾಸರ ಮನೆಯ ಹತ್ತಿರ ಮರೆಯಾಗಿ ನಿಂತು ನೋಡಿದಾಗ ಆರೋಪಿತನ ಅಂಗಡಿಯ ಮೇಲೆ ದಾಳಿ ಮಾಡಿದಾಗ ಓರಿನಲ್ ಚಾಯ್ಸ 90 ಎಮ್ ಎಲ್ ನ 50 ಪ್ಯಾಕೆಟಗಳು ಸಿಕ್ಕಿರುತ್ತವೆ. ಅದರಲ್ಲಿ ಒಂದು ಪ್ಯಾಕೆಟನ್ನು ಎಫ್ ಎಸ್ ಎಲ್ ವರದಿಗಾಗಿ ಕಳುಹಿಸಿರುತ್ತೇವೆ. ಆರೋಪಿತನ ವಿಚಾರಣೆ ಮಾಡಿರುತ್ತೇವೆ. ಆಗ ಅವನು ತನ್ನ ಹೆಸರನ್ನು ಹೇಳಿರುತ್ತಾನೆ. ಸಂಜೆಃ 6.20 ರಿಂದ 7.20 ರವೆರೆಗ ಪಂಚನಾಮೆಯನ್ನು ಜರುಗಿಸಿರುತ್ತೇವೆ. ನಂತರ ಮರಳಿ ಠಾಣೆಗೆ ಬಂದು ಚಾಸಾಃ 9 ರವರಿಗೆ ಮು. ಮಾ. ಮತ್ತು ಕಡತಗಳನ್ನು

ನೀಡಿರುತ್ತೇನೆ. ಸಾಕ್ಷಿಯು ಒಂದು ಪ್ಯಾಕೆಟನ್ನು ನೋಡಿ ಗುರುತಿಸಿರುವುದರಿಂದ ಅದನ್ನು ಮು. ಮಾ. 1 ಎಂದು ಗುರುತಿಸಲಾಯಿತು.

<u>**ಪಾಟಿ ಸವಾಲುಃ ಆರೋಪಿ ಪರ ಶ್ರೀ . ಎಸ್. ಎಸ್. ಪಿ. ವಕೀಲರಿಂದ.**</u>

1. ಬೇರೆ ಕೇಸಿನಲ್ಲಿರುವ ಆರೋಪಿತನ ಮಾಹಿತಿ ಇರುವುದಿಲ್ಲ. ನಾನು ದಾಳಿ ಮಾಡಲು ಹೋಗಿರುತ್ತೇನೆ. ಸದರಿ ಪೊಲಿಸ ಠಾಣೆಯಿಂದ 4.30 ಗಂಟೆಗೆ ಹೋಗಿರುತ್ತೇವೆ. ಹತ್ತಿಕುಣಿ ಕ್ರಾಸ್ ಮೂಲಕ ಘಟನಾ ಸ್ಥಳಕ್ಕೆ ಹೋಗಿರುತ್ತೇವೆ. ಪೋಲಿಸ ಠಾಣೆಯಿಂದ ಯಡ್ಡಳ್ಳಿ ಗ್ರಾಮಕ್ಕೆ ಹೋಗಲು ಅರ್ಧ ಗಂಟೆ ಸಮಯ ಬೇಕಾಯಿತು. ಮೊದಲನೆ ದಾಳಿ ಮಾಡಲು 5.00 ಗಂಟೆಗೆ ಘಟನಾ ಸ್ಥಳಕ್ಕೆ ಹೋಗಿರುತ್ತೇವೆ. ಮೊದಲನೆ ಪ್ರಕರಣದ ಬಗ್ಗೆ ದಾಳಿ ಮಾಡಿದ ಬಗ್ಗೆ ನನಗೆ ಗೊತ್ತಿಲ್ಲ. ಸದರಿ ಘಟನಾ ಸ್ಥಳದ ಸುತ್ತ-ಮುತ್ತ ಒಂದು ಗುಡಿ ಮತ್ತು ಮನೆಗಳು ಇವೆ ಎಂದರೆ ಸರಿ. ಸದರಿ ಅಂಗಡಿಯ ಹತ್ತಿರ ಖರೀದಿ ಮಾಡಲು 1 ರಿಂದ 2 ಜನ ಇದ್ದರು. ಸದರಿ ಘಟನಾ ಸ್ಥಳ ಸೇಡಂ ಮುಖ್ಯ ರಸ್ತೆಗೆ ಬರುತ್ತದೆ. ಸದರಿ ಘಟನಾ ಸ್ಥಳದಲ್ಲಿ ರಸ್ತೆಯು ಯಾವಾಗಲೂ ಬಿಜಿ ಇರುತ್ತದೆ ಎಂದರೆ ಸರಿ. ಘಟನಾ ಸ್ಥಳದಲ್ಲಿ ಸಾಕಷ್ಟು ಅಂಗಡಿಗಳು ಇವೆ ಎಂದರೆ ನಾನು ನೋಡಿರುವುದಿಲ್ಲ. ನಾವು ಮರೆಯಾಗಿ ಸುಮಾರು 20 ನಿಮಿಷಗಳ ಕಾಲ ನಿಂತಿರುತ್ತೇವೆ.

2. ಸದರಿ 50 ಪ್ಯಾಕೆಟಗಳ ನಂಬರಗಳ ಬಗ್ಗೆ ನನಗೆ ಗೊತ್ತಿಲ್ಲ. ಪಂಚರನ್ನು ಯಾರು ಕರೆದುಕೊಂಡು ಬಂದಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಅಧಿಕಾರಿ ನನ್ನ ಹೇಳಿಕೆಯನ್ನು ಪಡೆದುಕೊಂಡಿರುವುದಿಲ್ಲ. ಸದರಿ ಕಿರಾಣಿ ಅಂಗಡಿಯ ಮಾಲೀಕರು ಯಾರು ಇದ್ದರು ಎಂದರೆ ಸಾಕ್ಷಿಯು ಆರೋಪಿತನು ಇರುತ್ತಾನೆ ಎಂದು ನುಡಿಯುತ್ತಾರೆ. ಸದರಿ ಅಂಗಡಿಗೆ ಸಂಬಂಧಪಟ್ಟಂತೆ ಯಾವುದೇ ಕಾಗದ ಪತ್ರ ತೆಗೆದುಕೊಂಡಿರುವುದಿಲ್ಲ. ಸದರಿ ದಾಖಲಾತಿಯನ್ನು ತೆಗೆದುಕೊಂಡಿರುವುದರ ಬಗ್ಗೆ ನಾನು ನೋಡಿರುವುದಿಲ್ಲ. ನಾನು ಯಾವುದೇ ದಾಳಿಗೆ ಹೋಗಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ನಮಗೆ ಮಾಹಿತಿ ಬಂದ

ನಂತರ ಪಂಚರನ್ನು ಕರೆದುಕೊಂಡು ಹೋಗಿ ಮರೆಯಾಗಿ ನಿಂತು ನೋಡಿ ಮದ್ಯವನ್ನು ಜಪ್ತಿಪಡಿಸಿಕೊಂಡಿರುತ್ತೇವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪಂಚನಾಮೆ ಕಾಲದಲ್ಲಿ ನಾನು ಇದ್ದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾಃ 1 ರವರ ಮಾತು ಕೇಳಿ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಮು. ಮಾ. ಮತ್ತು ಆರೋಪಿಗೆ ಯಾವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು).

ಓ. ಹೇ. ಕೇ. ಸರಿ ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂಡಾಧಿಕಾರಿಗಳು ಯಾದಗಿರಿ